
# ಅನುಬಂಧ ಭಾಗ



ಯೇಸುವಿನ
ಸೇವೆಯಲ್ಲಿನ
ಪಾಲೇಸ್ತಿನ
ಸಿರಿಯ
ಸಿದೋನ್
ತೈರ್
ಹೆರ್ಮೋನ್ ಬೆಟ್ಟ
ಕೈಸರೆಯ ಪಿಲಿಪ್ಪಿ
ಬಾಷಾನು ಜಿಲ್ಲೆ
ಗಲಿಲಾಯ
ಬೇತ್ಸಾಯಿ?
ಕಪೆರ್ನೌಮು
ಬೇತ್ಸಾಯಿ-ಜೂಲಿಯಸ್
ಗದರೇನ
ಮಗದಾನ
ತಿಬೇರಿಯಾ
ಗಲಿಲಾಯ ಸಮುದ್ರ
ನಜರೇತ
ದೆಕೊಪೊಲ್ಯ
ಮಹಾ ಸಮುದ್ರ
ಸಮಾರ್ಯ
ಯೊರ್ದನ್ ನದಿ
ಪೆರಿಯಾ
ಯೆರೂಸಲೇಮ
ಯೂದಾಯ
ಮೃತ ಸಮುದ್ರ
ಮೆಕರೆಸ್

## ಯೇಸುವಿನ ಅದ್ಭುತ ಕಾರ್ಯಗಳು

| ನೀರನ್ನು ದ್ರಾಕ್ಷಾರಸವನ್ನಾಗಿಸಿದ್ದು | *ಮತ್ತಾಯ* | *ಮಾರ್ಕ* | *ಲೂಕ* | *ಯೋಹಾನ* |
|---|---|---|---|---|
| ಕಪೆರ್ನೌಮಿನಲ್ಲಿ ದೆವ್ವವನ್ನು ಬಿಡಿಸಿದ್ದು | | | | 2:1-11 |
| ಪೇತ್ರನ ಅತ್ತೆಯನ್ನು ಗುಣಪಡಿಸಿದ್ದು | | 1:23-26 | 4:33-35 | |
| ಅದ್ಭುತವಾಗಿ ಮೀನುಗಳನ್ನು ಹಿಡಿಸಿರುವುದು | 8:14-17 | 1:29-31 | 4:38, 39 | |
| ರೋಗಿಯ ಕುಷ್ಟ ಗುಣಪಡಿಸಿದ್ದು | | | 5:1-11 | |
| ಪಾರ್ಶವಾಯವ ವ್ಯಕ್ತಿಯನ್ನು ಗುಣಪಡಿಸಿದ್ದು | 8:2-4 | 1:40-45 | 5:12-16 | |
| ಕೈಬತ್ತಿ ಹೋವನನ್ನು ಸ್ವಸ್ತಮಾಡಿದ್ದು | 9:1-8 | 2:1-12 | 5:17-26 | |
| ಶತಾಧಿಪತಿಯ ಸೇವಕನನ್ನು ಸ್ವಸ್ತಪಡಿಸಿದ್ದು | 12:10-13 | 3:1-5 | 6:6-11 | |
| ವಿಧವೆಯ ಮಗನನ್ನು ಎಚ್ಚಿಸಿದ್ದು | 8:5-13 | | 7:1-10 | |
| ಬಿರುಗಾಳಿಯನ್ನು ಪ್ರಶಾಂತಮಾಡಿದ್ದು | | | 7:11-17 | |
| ದೆವ್ವ ಹಿಡಿದ ಗೇನಜರೇತನನ್ನು ಗುಣಪಡಿಸಿದ್ದು | 8:23-27 | 4:37-41 | 8:22-25 | |
| ರಕ್ತಸ್ರಾವ ಹೆಂಗಸನ್ನು ಗುಣಪಡಿಸಿದ್ದು | 8:28-34 | 5:1-20 | 8:26-39 | |
| ಹಾಗೂ ಮಗಳನ್ನು ಎಚ್ಚಿಸಿದ್ದು | 9:18-26 | 5:21-43 | 8:40-56 | |
| ಇಬ್ಬರು ಕುರುಡರನ್ನು ಗುಣಪಡಿಸಿದ್ದು | 9:27-31 | | | |
| ಮೂಖನನ್ನು ಸ್ವಸ್ತಪಡಿಸಿದ್ದು | 9:32, 33 | | | |
| ಅಧಿಕಾರಿಯ ಮಗನನ್ನು ಗುಣಪಡಿಸಿದ್ದು | | | | 4:46-54 |
| ಕುಂಟನನ್ನು ಸ್ವಸ್ತಪಡಿಸಿದ್ದು | | | | 5:1-9 |
| ಐದು ಸಾವಿರ ಜನನ್ನು ಉಣಬಡಿಸಿದ್ದನು | 14:15-21 | 6:35-44 | 9:10-17 | 6:1-14 |

| | | | | |
|---|---|---|---|---|
| ನೀರಿನ ಮೇಲೆ ನಡೆದದ್ದು | 14:25-33 | 6:48-52 | | 6:16-21 |
| ನಾಲ್ಕು ಸಾವಿರ ಜನರಿಗೆ ಊಣಬಡಿಸಿದ್ದು | 15:32-39 | 8:1-9 | | |
| ಮೀನುನ ಬಾಯಿಂದ ಸುಂಕದ ಹಣವನ್ನು ಪಡೆದದ್ದು | 17:24-27 | | | |
| ದೆವ್ವವನ್ನು ಬಿಡಿಸಿದ್ದು | 12:22, 23 | | 11:14 | |
| ಕಾನಾನಿನ ಮಹಿಳೆಯ ಮಗಳನ್ನು ಗುಣಪಡಿಸಿದ್ದು | 15:21-28 | 7:24-30 | | |
| ಕಿವುಡನನ್ನು ಗುಣಮಾಡಿದ್ದು | | 7:31-37 | | |
| ಕುರುಡನನ್ನು ಗುಣಪಡಿಸಿದ್ದು | | 8:22-26 | | |
| ದೆವ್ವ ಹಿಡಿದ ಹುಡುಗನನ್ನು ಗುಣಪಡಿಸಿದ್ದು | 17:14-18 | 9:14-29 | 9:37-43 | |
| ಕುಂಟ ಮಹಿಳೆಯನ್ನು ಗುಣಪಡಿಸಿದ್ದು | | | 13:11-17 | |
| ಜಲರೋಗಿಯನ್ನು ಗುಣಪಡಿಸಿದ್ದು | | | 14:1-6 | |
| ಹತ್ತುಮಂದಿ ಕುಷ್ಟರೋಗಿಗಳನ್ನು ಗುಣಪಡಿಸಿದ್ದು | | | 17:11-19 | |
| ಹುಟ್ಟಿನಿಂದ ಕುರುಡನಾಗಿದವನನ್ನು ಗುಣಪಡಸಿದ್ದು | | | | 9:1-7 |
| ಲಾಜರನನ್ನು ಎಬ್ಬಿಸಿದ್ದು | | | | 11:1-45 |
| ಇಬ್ಬರು ಕುರುಡರನ್ನು ಗುಣಪಡಿಸಿದ್ದು | 20:29-34 | 10:46-52 | 18:35-43 | |
| ಅಂಜೂರಮರವನ್ನು ಶಪಿಸಿದ್ದು | 21:18-22 | 11:12-14 | | |
| ಮಲಕನ ಕಿವಿಯನ್ನು ಪುನಸ್ಥಾಪಿಸಿದ್ದು | | | 22:50, 51 | |
| ಅದ್ಭುತವಾಗಿ ಮೀನುಗಳನ್ನು ಹಿಡಿಸಿದ್ದು | | | | 21:1-14 |

# ಫರಿಸಾಯರು ಸಮರ್ಥಿಸಿಕೊಂಡಾಗ

## (ಮತ್ತಾಯ 15:12-14)

ಫರಿಸಾಯರು ತಮ್ಮ ಸಂಪ್ರದಾಯಗಳಿಂದ ದೇವರ ಆಜ್ಞೆಗಳನ್ನು ಉಲ್ಲಂಘಿಸಿದ್ದಾರೆ ಎಂದು ಯೇಸು ಹೇಳಿದನು (ಮತ್ತಾಯ 15:3-6). ಪ್ರವಾದಿಯಾದ ಯೆಶಾಯನಿಂದ ಖಂಡಿಸಲ್ಪಟ್ಟ ಅವರನ್ನು "ಕಪಟಿಗಳು" ಎಂದು ಕರೆದನು (ಮತ್ತಾಯ 15:7-9). ನಂತರ, ಆತನ ಶಿಷ್ಯರು ಜನರ ಗುಂಪನ್ನು ಬಿಟ್ಟಾಗ (ಮಾರ್ಕ 7:17), ಅವರು "ಫರಿಸಾಯರು ಈ ಮಾತನ್ನು ಕೇಳಿ ಬೇಸರಗೊಂಡರು ಎಂದು ನಿನಗೆ ಗೊತ್ತಾಯಿತೋ" ಎಂದ ಕೇಳಿದರು (ಮತ್ತಾಯ 15:12). ಅದೊಂದು ಅರಿತುಕೊಳ್ಳುವಿಕೆ ಎಂದು ನಾನು ಊಹಿಸಿಕೊಳ್ಳುತ್ತೇನೆ; ಧಾರ್ಮಿಕ ನಾಯಕರು ಬಹುಶ ರೋಸಿಹೋಗಿರಬಹುದು!

ನಿಯಮದಂತೆ ನಾವು ಇತರರನ್ನು ದೂಷಿಸುವದನ್ನು ಬಿಡಬೇಕು ಎಂದು ಸತ್ಯವೇದವು ಬೋಧಿಸುವುದಾಗಿದೆ (ನೋಡಿ ಮತ್ತಾಯ 17:27; 18:6; ರೋಮಾಪುರ 14:21; 1 ಕೊರಿಂಥ 8:13; KJV[1]). ಯೆಹೂದಿಗಳು ಯೇಸುವಿನ ವಿರುದ್ಧ ವೈರತ್ವ ಸಾಧಿಸಿದಂತೆ ಕೆಲಸಾರಿ ಹೇಗೂ ನಾವು ಏನು ಹೇಳುತ್ತೇವೆ ಅಥವಾ ಮಾಡುತ್ತೇವೆ ಎಂದು ಯೋಚಿಸದೆ ಕೆಲವರು ದೂಷಿಸುವವರಾಗಿರುತ್ತಾರೆ (ಮತ್ತಾಯ 13:57; ಮಾರ್ಕ 6:3). ಮನುಷ್ಯನಲ್ಲಿ ಏನಿದೆ ಎಂದು ತಿಳಿದರು (ಯೋಹಾನ 2:24, 25), ಯೇಸು ಫರಿಸಾಯರ ಹೃದಯವನ್ನು ನೋಡಿದನು ಮತ್ತು ಅವರ ದ್ವೇಷವನ್ನು ಕುಗ್ಗಿಸಲು ಸಾಧ್ಯವೆ ಇರಲಿಲ್ಲ. ಅವರಿಗೆ ಆತನ ಮಾತುಗಳು ಮೂಲತಹವಾಗಿ ಆ ಕಪಟಿ ಬೋಧಕರಿಗೆ, ವ್ಯಕ್ತಿಗತವಾದ ಎಚ್ಚರಿಸುವುದರ ಪ್ರಭಾವವು ಕೇಳುವವರಿಗೆ ಪ್ರಯೋಜನಕಾರಿಯಾಗಿತ್ತು (ಮತ್ತಾಯ 16:6, 12). ನಮ್ಮ ಬೋಧನೆಯಲ್ಲಿ ವೈರತ್ವದ ಹಕ್ಕು ನಮಗೆ ನೇರವಾಗಿ ಕೊಡುವದನ್ನು ಯೇಸು ಉದಾಹರಿಸುತ್ತಿದ್ದಾನೆಯೇ? ಇಲ್ಲ, ನೀನು ಮತ್ತು ನಾನು ಮಾನವನ ಹೃದಯವನ್ನು *ತಿಳಿಯೆವು ಮತ್ತು ತಿಳಿಯಲಾರೆವು* ನಾವು "ಸತ್ಯದ *ಪ್ರೀತಿಯಲ್ಲಿ*" ಯಾವಾಗಲೂ ಮಾತನಾಡುವವರಾಗಿರಬೇಕು (ಎಫೆಸ 4:15; ಒತ್ತಿ ಹೇಳಿದ್ದು ನನ್ನದು).

ಫರಿಸಾಯರ ದ್ವೇಷದ ಬಗೆಗೆ ಕ್ರಿಸ್ತನು ಮಾತ್ರ ಮೇಲ್ಮಾತಿಗೆ ಕಾಳಜಿಯುಳ್ಳವನಾಗಿರಲಿಲ್ಲ, ಆದರೆ ಆತನ ಶಿಷ್ಯರೂ ಇದ್ದರು. ಈ ಮೇಧಾವಿಗಳನ್ನು ಗೌರವಿಸಬೇಕೆಂದು ಬಾಲ್ಯದಿಂದಲೇ ಕಲಿಸಲ್ಪಟ್ಟವರಾಗಿದ್ದರು. ಮುಂದೆ, ಈ ಮುಖಂಡರು ಆಳುವಂಥ ಎಂಥ ಪ್ರಭಾವವನ್ನು ಹೊಂದಿದ್ದಾರೆಂದು ಮತ್ತು ಅವರನ್ನು ಉದ್ರೇಕಿಸಿದ್ದಾದರೆ ಗುರುವಿಗೂ ತಮಗೂ ವಿನಾಶದ ಪರಿಣಾಮವು ಸಂಭವಿಸುವದು ಎಂದು ಅವರು ತಿಳಿದಿದ್ದರು.

ಕರ್ತನು ತಕ್ಷಣವೇ ತನ್ನ ಹಿಂಬಾಲಕರನ್ನು ಸಮಧಾನಗೊಳಿಸಿದನು. ಆತನು "ಪರ ಲೋಕದಲ್ಲಿ ನನ್ನ ತಂದೆಯ ನಡೆದ ಇರುವ ಗಿಡಗಳಲ್ಲಾ ಬೇರಿನೊಂದಿಗೆ ಕಿತ್ತುಹಾಕಲ್ಪಡು ತ್ತವೆ" (ಮತ್ತಾಯ 15:13) ಎಂದು ಹೇಳಿದನು. "ನೆಡದ" ಎಂಬುದು ಫರಿಸಾಯರಿಂದ ಕಲಿಸಲ್ಪಟ್ಟ ಮಾನವ ನಿರ್ಮಿತ ಸಂಪ್ರದಾಯಗಳು ಆಗಿವೆಯೇ ಅಥವಾ ಫರಿಸಾಯರ ಪದ್ಧತಿಯ ಇವುಗಳ ಮೂಲವಾಗಿದೆಯೇ? ಸರಿಯಾದ ಉತ್ತರವು "ಎಲ್ಲಕ್ಕಿಂತ ಮೇಲಿನದು." ದೇವರು ಧರ್ಮಶಾಸ್ತ್ರವನ್ನು "ನೆಟ್ಟನು" ಆದರೆ ಆತನು ಫರಿಸಾಯರ ಸಂಪ್ರದಾಯಗಳನ್ನು "ನೆಡಲಿಲ್ಲ" ಅದೇ ರೀತಿಯಲ್ಲಿ, ಅಹಿತಕಾರಿಯಾದ ಕಳೆಯು ತೋಟದಲ್ಲಿ ಒಳ್ಳೆಯ ಸಸ್ಯಗಳಿಗೆ ಉಸಿರುಗಟ್ಟಿಸುತ್ತಿದೆ. ಹೀಗೆ ಫರಿಸಾಯರ ಸಂಪ್ರದಾಯಗಳು ಮಾನವರ ಹೃದಯ ಮತ್ತು ಜೀವಿತವನ್ನು ಹೊಸಹಾಕುತ್ತಿದೆ (ಮತ್ತಾಯ 15:3, 6, 9). ಒಬ್ಬ ಜಾರೂಕನಾದ ತೋಟ ಗಾರನು ತನ್ನ ತೋಟದಿಂದ ಕಳೆಯನ್ನು ಸ್ವಚ್ಛಮಾಡುವನು, ಹೀಗೆ ಕೊನೆಯಲ್ಲಿ ದೇವರು

ಸ್ಥಿರವಾಗಿ ನಿಲ್ಲುವನು ಮತ್ತು ಸುಳ್ಳುಬೋಧಕರನ್ನು ಹಾಗೂ ಅವರ ಬೋಧನೆಗಳನ್ನು ತೆಗೆದುಹಾಕುವನು.

ಹೀಗೆ ಕ್ರೈಸ್ತನು ತನ್ನ ಚಿಂತೆ ಅಪೋಸ್ತಲರಿಗೆ "ಅವರನ್ನು [ಫರಿಸಾರನ್ನು] ಬಿಟ್ಟು ಬಿಡಿರಿ" (ಮತ್ತಾಯ 15:14) ಎಂದು ಹೇಳಿದನು. ತನ್ನ ಹಿಂಬಾಲಕರು ಅವರ ಸುಳ್ಳು ಬೋಧನೆಗೆ ಸವಾಲೆಯೆದೆ ಆತನು ತನ್ನಷ್ಟಕ್ಕೆ ತಾನೇ ನಿರಾಕರಿಸುವುದನ್ನು ಮಾಡುವವು ಆಗಿವೆ (ನೋಡಿರಿ ಮತ್ತಾಯ 23). ಬದಲಾಗಿ, ಆತನು "ಅವರ ಅವೇಶಕ್ಕೆ ಯಾವದೇ ಲಕ್ಷವನ್ನು ಕೊಡಲಿಲ್ಲ."[2] The Living Bibleನಲ್ಲಿ "ಅವರನ್ನು ಅಲಕ್ಷಿಸಿದನು" ಎಂದಿದೆ.

ಫರಿಸಾಯರ ಕೋಪಕ್ಕೆ ಅಂಜಬಾರದನ್ನುವುದಕ್ಕೆ ಒಂದು ಕಾರಣವನ್ನು ಕೊಟ್ಟನು: ಅಂತಿಮವಾಗಿ ದೇವರು ಅವರಿಗಾಗಿ ಕಾಳವಹಿಸಿದನು. ಈಗ ಆತನು ಅವರಿಗೆ ಇನ್ನೊಂದು ಕಾರಣವನ್ನು ಕೊಟ್ಟನು: "ತಾವೇ ಕುರುಡರು,[3] ಮತ್ತೊಬ್ಬರಿಗೆ ದಾರಿ ತೋರಿಸುವುದಕ್ಕೆ ಹೋಗುತ್ತಾರೆ; ಕುರುಡನ ಕುರುಡನಿಗೆ ದಾರಿ ತೋರಿಸಿದರೆ ಅವರಿಬ್ಬರೂ,[4] ಕುಣಿಯಲ್ಲಿ ಬೀಳುವರು" (ಮತ್ತಾಯ 15:14). ಫರಿಸಾಯರು ಪೂರ್ವಾಗ್ರಹ, ಗರ್ವ, ಸ್ವಆಸಕ್ತಿಯಿಂದ ಕುರುಡರಾಗಿದ್ದರು. ಸ್ಪಷ್ಟವಾಗಿ, ಕುರುಡತನವು ಅವರನಾಶನದಲ್ಲಿ ಪರಿಣಾಮವಾಗಿದೆ.

ಕ್ರಿಸ್ತನು ತನ್ನ ಶಿಷ್ಯರಿಗೆ ಅವರು ಸರಿಯಾದುದನ್ನು ಮಾಡುವದು ಮತ್ತು ಯಾವುದು ಒಳ್ಳೆಯದು ಎಂದು ಬೋಧಿಸುವದನ್ನು ತಡೆಗಟ್ಟುವ "ಸಾಯುವ ಸಸ್ಯೆಗಳಾಗಿರಬಾರದು" ಮತ್ತು "ಕುರುಡ ಮಾರ್ಗದರ್ಶಿಯಾಗಬಾರದು" ಎಂದು ಹೇಳಿದನು. ನಮಗಿರುವ ಪಾಠವು ಅದೇ ಆಗಿದೆ ನಾವು ವೈರಿಗಳನ್ನು ಮಾಡಿಕೊಳ್ಳಲು ನಮ್ಮ ದಾರಿಯಿಂದ ಹೊರಗೆ ಹೋಗ ಬಾರದು, ನಮ್ಮ ನಿರ್ಗಮಿಸುವಿಕೆಯ ವಿಚಾರದಲ್ಲಿ ನಮ್ಮನ್ನು ನಿರಾಶೆ ಮಾಡುವ ವಿರೋಧ ವನ್ನು ನಾವೆಂದಿಗೂ ಇಟ್ಟುಕೊಳ್ಳಬಾರದು.

---

ಟಿಪ್ಪಣಿಗಳು

[1]"ದ್ವೇಷ" ಎಂಬ ಗ್ರೀಕಪದದ ಭಾಷಾಂತರವು "ಎಡುವುದಕ್ಕೆ ಕಾರಣ" ಎಂಬ ಅರ್ಥವನ್ನು ಒಳಗೊಂಡ ವಿವಿಧ ಅರ್ಥಗಳನ್ನು ಕೊಡುವುದಾಗಿದೆ. ಈ ಪ್ಯಾರಾದಲ್ಲಿ ಪಟ್ಟಿಯಾದ ವಚನಗಳನ್ನು NASB ಭಾಷಾಂತರದಲ್ಲಿ ಓದಿರಿ. ಚರ್ಚೆಗಾಗಿ, ಸಾಧ್ಯವಿರುವ ಎಲ್ಲಾ ಅರ್ಥಗಳನ್ನು, "ಸಿಟ್ಟಿಗೆ ಕಾರಣ ವಾದ ಮತ್ತೊಬ್ಬನ ಮೇಲೆ ಅಸಮಾಧಾನಗೊಳ್ಳುವದು" ಎಂಬ ಸಾಮಾನ್ಯವಾದುದನ್ನು ಕೂಡಾ ನಾನು ಒಳಗೊಳ್ಳಿಸಿದ್ದೇನೆ. [2]ಈ ಹೇಳಿಕೆಯನ್ನು ಕೀರ್ತನೆ 37:1, 2ರೊಂದಿಗೆ ಹೋಲಿಸಿರಿ. [3]ಓದಿರಿ ಮತ್ತಾಯ 23:16, 17, 19. [4]ಈ ಪರಿಚ್ಛೇದವು ಸುಳ್ಳುಬೋಧಕರ ಹಿಂಬಾಲಕರು ತಮ್ಮ ಸುಳ್ಳು ಬೋಧಕರಂತೆಯೇ ತಮ್ಮ ದೋಷಕ್ಕೆ ತಾವೇ ಜವಾಬ್ದಾರರಾಗುತ್ತಾರೆ ಎಂದು ಬೋಧಿಸುತ್ತದೆ.

# ಯೇಸು ನೀಡಿದ ಕ್ಲುಪ್ತವಾದ (ಮಿತಿಗೊಳಿಸಿದ) ಆದೇಶ

**ಮತ್ತಾಯ 10:9, 10ಎ:** "ನಿಮ್ಮ ಹಮ್ಮಿಣಿಗಳಲ್ಲಿ, *ಹೊನ್ನು ಹಣ* ದುಡ್ಡುಗಳನ್ನು" ತೆಗೆದುಕೊಂಡು ಹೋಗಬೇಡಿರಿ. ಗ್ರೀಕ್ ಭಾಷೆಯು "ಹಮ್ಮಿಣಿ" ಎಂದರೆ "ಸೊಂಟದ ಚರ್ಮದ ಚೀಲ" ಅದರಲ್ಲಿ ಹಣವನ್ನು ಗುಪ್ತವಾಗಿ ಇಡಲಾಗುತ್ತಿತ್ತು (ನೋಡಿ ಮಾರ್ಕ 6:8), ಆದ್ದರಿಂದ "ಸೊಂಟದ ಚರ್ಮದ ಚೀಲಗಳು" ಈ ಭಾವವನ್ನು ಹೇಳುತ್ತವೆ. "ಚೀಲ" ಎಂಬುದು ಪ್ರಾಯಾಣಕ್ಕಾಗಿ ಬೇಕಾದದ್ದನ್ನು ಕೊಂಡುಹೋಗುವದಕ್ಕೆ ಬಳಸುವ ಹೆಗಲು ಚೀಲ. ಇದನ್ನು ಪ್ರಾಯಾಣದ ಚೀಲಕ್ಕೆ ಹೋಲಿಸಬಹುದು. ಅಪೋಸ್ತಲರು ದಿನನಿತ್ಯದ ವಸ್ತುಗಳನ್ನು ಕೊಂಡಯ್ಯಬಾರದ್ದರಿಂದ ಇಂತಹ ಚೀಲಗಳು ಅವರಿಗೆ ಅಗತ್ಯವಿರಲಿಲ್ಲ.

**ಮಾರ್ಕ 6:10:** ನೀವು ಎಲ್ಲಿಯಾದರೂ ಒಂದು ಮನೆಯಲ್ಲಿ ಇಳುಕೊಂಡಾಗ ಆ ಸ್ಥಳದಿಂದ ಹೊರಡುವ ತನಕ *ಅಲ್ಲೆ ಇರ್ರಿ* (ನೋಡಿ ಮತ್ತಾಯ 10:11; ಲೂಕ 9:4). ಒಂದು ಮನೆಗೆ ಹೋಗುವಾಗ ಅಲ್ಲಿ ಹೆಚ್ಚು ಕಾಲ ತಂಗುವದು ವಾಡಿಕೆಯಾಗಿತ್ತು (ನೋಡಿ ಲೂಕ 7:44-46). ಒಂದು ಮನೆಯಲ್ಲಿ ಹೆಚ್ಚುಕಾಲ ತಂಗುವದು. ಸಮಯದ ವ್ಯರ್ಥವಾಗುತ್ತಿತ್ತು.

**ಮತ್ತಾಯ 10:12, 13:** "ನೀವು ಯಾವದೊಂದು ಊರಿಗೆ ಅಥವಾ ಹಳ್ಳಿಗೆ ಸೇರಿದಾಗ ಅಲ್ಲಿ ಯೋಗ್ಯರು ಯಾರೆಂದು ವಿಚಾರಣೆ ಮಾಡಿ ಮುಂದಕ್ಕೆ ಹೊರಡುವ ತನಕ ಅವರಲ್ಲೇ ಇರ್ರಿ." ಆ ಮನೆಯೊಳಗೆ ಹೋಗುವಾಗ ಶುಭವಾಗಲಿ ಅನ್ನಿರಿ. ಆ ಮನೆಯವರು ಯೋಗ್ಯರಾಗಿದ್ದರೆ *ನಿಮ್ಮ ಆಶೀರ್ವಾದವು ಅವರಿಗೆ ಆಗಲಿ.* ಅಯೋಗ್ಯರಾಗಿದ್ದರೆ ಆಶೀರ್ವಾದವು ಹಿಂದಕ್ಕೆ ಬರಲಿ. "ಮನೆಗೆ ಸಮಾಧಾನವಾಗಲಿ" ಎಂಬ ಶುಭವಿರಲಿ. ಅಪೊಸ್ತಲರನ್ನು ತಿರಸ್ಕರಿಸುವವರು ಈ ಸಮಾಧಾನವನ್ನು ಕಳಕೊಳ್ಳು ವರು (ನೋಡಿ ವಚನಗಳು 14, 15).

**ಮತ್ತಾಯ 10:14:** "ಮತ್ತು ಯಾವ ಸ್ಥಳದವರಾದರೂ ನಿಮ್ಮನ್ನು ಸೇರಿಸಿಕೊಳ್ಳದೆಯೂ ನೀವು ಹೇಳುವದನ್ನು ಕೇಳದೆಯೂ ಹೋದರೆ ಆ ಸ್ಥಳದಿಂದ ಹೊರಟುಹೋಗುವಾಗ ನಿಮ್ಮ *ಕಾಲಿಗೆ ಹತ್ತಿದ ಧೂಳನ್ನು* ಝಾಡಿಸಿಬಿಡಿರಿ; ಅದು ಅವರಿಗೆ ಸಾಕ್ಷಿಯಾಗಿರಲಿ ಎಂದು ಹೇಳಿದನು" (ನೋಡಿ ಮಾರ್ಕ 6:11; ಲೂಕ 9:5). ಅನ್ಯರು ಮುಟ್ಟಿದ ಯಾವುದೇ ವಸ್ತುಗಳಾಗಿರಲಿ ಅವುಗಳು ಯೆಹೂದ್ಯರು "ಅಶುದ್ಧ"ವೆಂದು ಪರಿಗಣಿಸುತ್ತಿದ್ದರು. ಆದುದ್ದರಿಂದ ಅನ್ಯ ದೇಶವಾದ ಪಾಲೇಸ್ತೇನನ್ನು ಬಿಟ್ಟು ಬರುವಾಗ ತಮ್ಮಕಾಲಿನ ದೂಳನ್ನು ಜಾಡಿಸಿ ಬಿಟ್ಟರು, ಅದು ಯೇಸುವಿನ ಅಪ್ಪಣೆ ಮತ್ತು ಯೆಹೂದ್ಯರು ಅನ್ಯರಿಗಿಂತ ಉತ್ತಮರಲ್ಲ ಎಂಬ ಸಂಕೇತವೂ ಆಗಿತ್ತು.

**ಮತ್ತಾಯ 10:17:** "... ಇದಲ್ಲದೆ ಜನರ ವಿಷಯದಲ್ಲಿ ಎಚ್ಚರಿಕೆಯಾಗಿರ್ರಿ; ಅವರು ನಿಮ್ಮನ್ನು ನ್ಯಾಯ ವಿಚಾರಣೆಯ ಸಭೆಗಳಿಗೆ ಎಳಕೊಂಡು ಹೋಗುವರು; ತಮ್ಮ *ಸಭಾಮಂದಿರಗಳಲ್ಲಿ ನಿಮ್ಮನ್ನು ಕೊರಡೆಗಳಿಂದ (ಚಾವಟಿ, ಬಾರಿಸು) ಹೊಡೆಯುವರು.*" "ಕೊರಡೆಗಳಿಂದ" ಹೊಡೆಯವುದು ಸಭಾಮಂದಿರದ ಕ್ರೂರವಾದ ಶಿಕ್ಷೆಯಾಗಿತ್ತು. ಅಲ್ಲಿದ್ದ "ಒಬ್ಬ ಸಹಾಯಕನು" ಇದನ್ನು ಮಾಡುತ್ತಿದ್ದನು. ("ನೀನು ನಂಬುತ್ತೀಯಾ" ಮತ್ತು "ತಿರಸ್ಕಾರ ಸಹಿಸುವುದು" ಎಂಬ ಪಾಠದಲ್ಲಿ ಈ ಸಹಾಯಕನ ಕುರಿತು ನೋಡಿರಿ.)

**ಮತ್ತಾಯ 10:23:** "... ಒಂದು ಊರಲ್ಲಿ ನಿಮ್ಮನ್ನು ಹಿಂಸೆಪಡಿಸಿದರೆ ಮತ್ತೊಂದು ಊರಿಗೆ ಓಡಿ ಹೋಗಿರಿ; *ಮನುಷ್ಯ ಕುಮಾರನು ಬರುವಷ್ಟರಲ್ಲಿ* ನೀವು ಇಸ್ರಾಯೇಲ್ ಜನರ ಊರುಗಳ ಸಂಚಾರವನ್ನು ತೀರಿಸಿರುವದಿಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ." ಇದು ಈ ಅಧ್ಯಾಯದ ಕಠಿಣವಾದ ವಚನವಾಗಿದೆ.[1] ಆ ಪದ ಬಳಕೆಯಲ್ಲಿ ಇರುವದಿಲ್ಲ. ಕ್ರಿ.ಪೂ.

70ನೇ ಶತಮಾನದಲ್ಲಿ, ಆತನು ಯೆಹೂದ್ಯರಿಗೆ ತೀರ್ಪು ನೀಡಲು ಬರುವನು ಎಂದು ಹೇಳಿದ ವಿಚಾರಿಸಿ ವಚನ 15 ಸಂಬಂಧ ಪಟ್ಟಿರುತ್ತದೆ. ಯೇಸು ಅವ ಹಿಂದೆಯೇ ಬರುವನು ಎಂಬ ಅರ್ಥವಾಗಿದೆ.

**ಮತ್ತಾಯ 10:25ಬಿ:** "*ಅವರು ಮನೆಯ ಯಜಮಾನನಿಗೆ ಬೆಲ್ಜೆಬೂಲನೆಂದು ಹೆಸರಿಟ್ಟ ...*" ಮನೆಯ ಯಜಮಾನನನ್ನೇ ಅವರು ಬೆಲ್ಜೆಬೂಲನೆಂದು ಕರೆದಿರುವದಾದರೆ ಯೇಸು ದೆವ್ವಗಳನ್ನು ಬಿಡಿಸಿದ ವಿಚಾರದಲ್ಲಿ ಫರಿಸಾಯರು ಆತನ ಮೇಲೆ ತಪ್ಪು ಹೊರಿಸುವ ಸಲುವಾಗಿ, ಈ ರೀತಿ ಹೇಳಿದ್ದರು. ("ಕಾರ್ಯ ನಿರತ ದಿನದ" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ ನೋಡಿರಿ.)

**ಮತ್ತಾಯ 10:26:** "*ಮರೆಯಾಗಿರುವ ಯಾವದೂ ವ್ಯಕ್ತವಾಗದೆ ಇರುವದಿಲ್ಲ; ಹೊರಪಡದ ರಹಸ್ಯವೂ ಇಲ್ಲ.*" "ಮರೆಯಾದ" ಸಂಗತಿ ಎಂದರೆ ಯೇಸುವನ್ನು ಆತನ ಅಪೋಸ್ತಲರು ಮತ್ತು ಅವರ ಕೆಲಸಗಳ ಗುಪ್ತವಾಗಿ ನಾಶಮಾಡುವ ವಿಚಾರದಲ್ಲಿ ಈ ಪದವನ್ನು ಬಳಸಿರಬಹುದು. "ಗುಪ್ತವಾದ ಕಾರ್ಯಗಳು ಬೆಳಕಿಗೆ ಬರುವವು" ಎಂದು ಸತ್ಯವೇದ ತಿಳಿಸುತ್ತದೆ. ಈ ಯೋಜನೆಗಳ ನೆರವೇರಿಕೆಯ ಕಾರ್ಯಗಳನ್ನು ಈ ದಿವಸಗಳಲ್ಲಿ ನೋಡುವವರಾಗಿದ್ದೇವೆ.

**ಮತ್ತಾಯ 10:41, 42:** "*ಪ್ರವಾದಿಯನ್ನು ಪ್ರವಾದಿಯೆಂದು ಸೇರಿಸಿಕೊಳ್ಳುವವನು ಪ್ರವಾದಿಗೆ ಬರತಕ್ಕ ಪ್ರತಿಫಲವನ್ನು ಹೊಂದುವನು; ನೀತಿವಂತನನ್ನು ನೀತಿವಂತನೆಂದು ಸೇರಿಸಿಕೊಳ್ಳುವವನು* ನೀತಿವಂತನಿಗೆ ಬರತಕ್ಕ ಪ್ರತಿಫಲವನ್ನು ಹೊಂದುವನು. ಮತ್ತು *ಈ ಚಿಕ್ಕವರಲ್ಲಿ ಒಬ್ಬನಿಗೆ ಯೇಸುವಿನ ಶಿಷ್ಯನೆಂದು ಯಾವನಾದರೂ ಒಂದು ತಂಬಿಗೆ ತಣ್ಣೀರನ್ನಾದರೂ ಕುಡಿಯುವದಕ್ಕೆ ಕೊಟ್ಟರೆ ಬರತಕ್ಕ ಪ್ರತಿಫಲವುಅವನಿಗೆ ತಪ್ಪುವದೇ ಇಲ್ಲವೆಂದು* ನಿಮಗೆಸತ್ಯವಾಗಿ ಹೇಳುತ್ತೇನೆ ಅಂದನು." ಅಪೊಸ್ತಲರನ್ನು ನಿರಾಕರಿಸುವವರು ಶಾಪಗ್ರಸ್ಥರು ಎಂದು ಕರ್ತನು ಈಗಾಗಲೇ ತಿಳಿಸಿದ್ದಾನೆ (ವಚನಗಳು 14, 15). ಇಲ್ಲಿ ಯಾರಾದರೂ ಅವರ ಮಾತುಗಳನ್ನು ಕೇಳುವದಾದರೆ, ಅವರು ಆಶೀರ್ವಾದ ಪಡೆಯವರು ಎಂದು ತಿಳಿಸಿದ್ದಾರೆ. "ಈ ಚಿಕ್ಕವರು" ಅಂದರೆ ಪ್ರಾಯಶಃ ಅಪೊಸ್ತಲರಾಗಿರಬಹುದು. ಇಲ್ಲಿ ಸುವಾರ್ತೆಯ ಒಂದು ಅಂಶವು ಅಡಕವಾಗಿದೆ: ಅವರಿಗೆ ಒಂದು ತಂಬಿಗೆ ನೀರು ಕೊಡುವವರು, ಅವರನ್ನು ಒಪ್ಪಿಕೊಂಡ ಸಂಕೇತವಾಗಿದೆ (ಆದರೆ ಇಂಥಹ ಕಾರ್ಯಮಾಡುವದರಿಂದ ರಕ್ಷಣೆಯಾಗುವದಿಲ್ಲ). ಶಿಷ್ಯರನ್ನು ಸ್ವೀಕರಿಸಿದವರು ರಕ್ಷಣೆ ಹೊಂದುವರು ಎಂಬ ಅರ್ಥವಾಗಿದೆ.[3]

**ಮಾರ್ಕ 6:12, 13:** "ಅವರು ಹೊರಟು ಹೋಗಿ ಪ್ರಸಂಗಿಸಿದರು" ಮತ್ತು ಅವು *ಎಣ್ಣೆಯಿಂದ ಅಭಿಷೇಕಿಸಿದ್ದರಿಂದ* ಬಹಳ ಜನ ಅವರಲ್ಲಿ ಸ್ವಸ್ಥರಾದರು. ಸ್ವಸ್ಥತೆಯು ಗೌಪ್ಯತೆಯನ್ನು (ನೋಡಿ ಯಾಕೋಬ 5:14) ಒಳಗೊಂಡಿತ್ತು. ಕೆಲವರನ್ನು ಎಣ್ಣೆಯಿಂದ ಅಭಿಷೇಕಿಸಿದ್ದರಲ್ಲಿ ಮೂರು ಮೂಲ ಕಾರಣಗಳಿವೆ. (1) ಸಂಪ್ರದಾಯ ಪದ್ಧತಿಯ ಉದ್ದೇಶ - ಆಚಾರದ ಒಂದು ಭಾಗವಾ ಗಿತ್ತು (ನೋಡಿ ವಿಮೋಚನಕಾಂಡ 30:25, 26, 30; 1 ಸಮುವೇಲ 9:16; 15:1; 16:13). (2) ಪ್ರಯೋಗಿಕ ಉದ್ದೇಶ - ವ್ಯಯಕ್ತಿಕ ಕಲಿಯುವಿಕೆಗೆ (ನೋಡಿ ರೂತ 3:3; 2 ಸಮುವೇಲ 14:2). ಈ ಸಂಪರ್ಕದಲ್ಲಿ ಅವರ ತಲೆಯನ್ನು ಎಣ್ಣೆಯಿಂದ ಅಭಿಷೇಕಿಸುವದು ಅವರಿಗೆ ಹೊಸ ತನವನ್ನು, ಚೈತನ್ಯವನ್ನುಂಟು ಮಾಡುವದು (ನೋಡಿ ಲೂಕ 7:46; ಇಬ್ರಿಯ 1:9). (3) ವೈದ್ಯಕೀಯ ಉದ್ದೇಶ ಗಾಯಗಳನ್ನು ಆರೈಸುವ ಭಾಗವಾಗಿತ್ತು (ನೋಡಿ ಯೆಶಾಯ 1:6; ಲೂಕ 10:34); ಎಣ್ಣೆಯು ಗಾಯವನ್ನು ಮೃದುಗೊಳಿಸಿ ರಕ್ಷಿಸುವದು ಅಪೊಸ್ತಲರು ಅವರನ್ನು ಸ್ವಸ್ಥಪಡಿಸುವದಕ್ಕೆ ಮುಂಚೆ ಅವರನ್ನು ಎಣ್ಣೆಯಿಂದ ಅಭಿಷೇಕಿಸುತ್ತಿದ್ದರು. ಅವರು ಪುನಶ್ಚೇತನಗೊಳ್ಳಬೇಕೆಂದು ಅವರು ಆಸಕ್ತಿ ವಹಿಸಿದ್ದರೋ?[4] ಅವರು ಆರಂಭದ ಮೊದಲು ಪ್ರಥಮ ಚಿಕಿತ್ಸೆಯನ್ನು ಹೊಂದಿದ್ದರೋ? ಯೇಸುವಿನ ಸ್ವಸ್ಥತೆಯಲ್ಲಿ, ಯಾರಿಗೂ ಎಣ್ಣೆಯಿಂದ ಅಭಿಷೇಕಿಸಿದ ಪುರಾವೆಯಿಲ್ಲ. ಇದು ಅಗತ್ಯವಿಲ್ಲದ ಪ್ರಗತಿಯಿರಬಹುದು. ಕ್ರಿಸ್ತನು ಕೆಲವು

ಸಮಯ ಆತನು ಮಾಡದೆ ಸ್ವಸ್ಥತೆಯಲ್ಲಿ ಪ್ರಾಯೋಗಿಕ ಗುರುತುಗಳನ್ನು ಕಾಣಬಹುದು - ಅಗತ್ಯವಿರುವವರನ್ನು ಮುಟ್ಟದ್ದು, ಮಣ್ಣಿನಿಂದ ಕಣ್ಣನ್ನು ಸ್ಪರ್ಶಿಸಿದ್ದು, ಮತ್ತು ಹಾಗೆ ಇವುಗಳಲ್ಲಿ ಕೊನೆಯ ಫಲಿತಾಂಶವಿಲ್ಲದ್ದು, ಇದೆ ಮಾದರಿಯಲ್ಲಿ ಅಪೊಸ್ತಲರು ಎಣ್ಣೆಯಿಂದ ಅಭಿಷೇಕಿಸಿರಬಹುದು.

---

ಟಿಪ್ಪಣಿಗಳು

[1]Will Ed Warren, Class Syllabus, *The Life of Christ: The Synoptic Gospels*, Harding University, 1991, 41. [2]ಎರಡನೆ ಬರೋಣದವರೆಗೆ ಯೆಹೂದ್ಯರಿಗೆ ಸುವಾರ್ತೆ ಸಾರಲ್ಪಡುತ್ತದೆ ಎಂಬುದು ಕೆಲವರ ನಂಬಿಕೆ, ಅದು ಸಾಧ್ಯವಿರದೆ ಇರಬಹುದು. [3]ದೇವರ ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆ (ಎಫೆಸ 2:8, 9). [4]ಅಪೊಸ್ತಲರು ಗುಣಪಡಿಸಲು ಮುಂದಾದರೂ, ಅದು ಅಸಾಧ್ಯವೂ ಆಗಿರಲಿಲ್ಲ. ನಮಗೆ ನಾವುಗಳೇ ಮಾಡಿಕೊಳ್ಳಬಹುದಾದ ಸಂಗತಿಗಳನ್ನು ದೇವರು ನಮಗಾಗಿ ಮಾಡದೆ ಇರಬಹುದು.